ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 45/2025

...................................................................

CW 08
PW 06

ಹೆಸರು : ಪುಟ್ಟಪ್ಪ ಕಾರಬಾರಿ
ತಂದಯ ಹೆಸರು : ಪಾಂಡಪ್ಪ
ವಯಸ್ಸು : 54 ವರ್ಷ
ಉದ್ಯೋಗ : ಸಾರಿಗೆ ನಿಯಂತ್ರಕ, ಹಳಿಯಾಳ
ವಾಸಸ್ಥಳ : ಧಾರವಾಡ.

ದಿನಾಂಕ 09-12-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ರಿಂದ 5 ರವರು ಪರಿಚಯ ಇಲ್ಲ. ಚಾಸಾ 6 ರವರು ಪರಿಚಯ. ಆರೋಪಿ ಪರಿಚಯ ಹಾಗೂ ನಮ್ಮ ಇಲಾಖೆಯ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಾರೆ.

ನಮ್ಮ ಘಟಕದ ವ್ಯವಸ್ಥಾಪಕರ ಆದೇಶದ ಮೇರೆಗೆ ನಾನು ಅಪಘಾತ ಪಡಿಸಿದ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಬಿಡಿಸಿಕೊಂಡಿರುತ್ತೇನೆ. ಅಪಘಾತವಾದ ವಿಚಾರವಾಗಿ ಬಸ್ಸನ್ನು ಜಪ್ತು ಮಾಡಲಾಗಿತ್ತು. ನಾನು ಠಾಣೆಯಲ್ಲಿ ವಿಚಾರಿಸಿದಾಗ ಕೆಸರೋಳ್ಳಿ ಕ್ರಾಸ್ ಹತ್ತಿರ ಕೆ ಎಸ್ ಆರ್ ಟಿ ಸಿ ಮತ್ತು ಮೋಟಾರ್ ಸೈಕಲ್ ಗೆ ಅಪಘಾತ ಆಗಿತ್ತು ಎಂದು ಹೇಳಿದರು. ಅಪಘಾತವನ್ನು ನಾನು ನೋಡಿಲ್ಲ. ಸದರಿ ಬಸ್ಸ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ 5 ಅನ್ನು ತೋರಿಸಲಾಗಿ ಸಾಕ್ಷಿ ಸದರಿ ಬಸ್ಸ ನ್ನು ನಾನು ಆ ದಿನ ಬಾಂಡ್ ಪತ್ರವನ್ನು ಬರೆದು ಬಿಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಕಲಂ 133 ರಡಿಯಲ್ಲಿ ನೀಡಿದ ನೋಟಿಸನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ನೊಟೀಸನ್ನು ಠಾಣೆಯವರು ನಮಗೆ ನೀಡಿದ್ದರು ಎಂದು ನುಡಿಯುತ್ತಾರೆ. ನೋಟೀಸನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11ಎ ಎಂದು ಗುರುತಿಸಲಾಯಿತು. ಸದರಿ ನೊಟೀಸನ್ನು ನಾನು ಉತ್ತರ ನೀಡಿರುತ್ತೇನೆ. ಸಾಕ್ಷಿ ಸದರಿ ಉತ್ತರವನ್ನು ಮತ್ತು ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ನೊಟೀಸ ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12ಎ ಗುರುತಿಸಲಾಯಿತು. ಸದರಿ ಉತ್ತರದೊಂದಿಗೆ ನಾನು,

ದೃಢೀಕರಣ ಪತ್ರ, ಅಧಿಕಾರ ಪತ್ರ, ಆರ್ ಸಿ ಯ ನಕಲು, ಇನ್ಸೂರನ್ಸ್ ಹಾಜರುಪಡಿಸಿರುತ್ತೇನೆ. ಆ ದಿನ ನಾನು ಕರಾರು ಪತ್ರ ಬರೆದುಕೊಟ್ಟು ಬಸ್ಸನ್ನು ಬಿಡಿಸಿಕೊಂಡಿರುತ್ತೇನೆ. ಕರಾರು ಪತ್ರ ಮತ್ತು ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಕರಾರು ಪತ್ರವನ್ನು ನಿಪಿ 13 ಎ ಎಂದು, ಸಾಕ್ಷಿಯ ಸಹಿಯನ್ನು ನಿಪಿ 13 ಎ ಎಂದು ಗುರುತಿಸಲಾಯಿತು. ಅಪಘಾತವಾದ ದಿನ ಸದರಿ ಬಸ್ಸನ್ನು ಆರೋಪಿತ ಚಲಾಯಿಸುತ್ತಿದ್ದ.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಸಿ ವಿ ಎನ್ ವಕೀಲರಿಂದ.

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ, ಅಪಘಾತವಾಗುವ ಸಮಯದಲ್ಲಿ ಬಸ್ಸನ್ನು ಯಾರು ಚಲಾಯಿಸುತ್ತಿದ್ದರು ಎಂದು ನಾನು ನೋಡಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.